ಭಾರತೀಯ ಅಂಚೆ ಮತ್ತು ಆರ್.ಎಮ್.ಎಸ್.ಇಲಾಖೆ ನೌಕರರ
ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು
ದೂರವಾಣಿ 080–41248612/22202119

E-Mail : iprmscoops@gmail.com website : postalcoopsociety.org

## 9ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಆಮಂತ್ರಣ

ಮಾನ್ಯ ಸದಸ್ಯರೇ,

**2018–19ನೇ ಸಾಲಿನ ಮಹಾಸಭೆಯ ಸೂಚನಾ ಪತ್ರ**

ಸಂಘದ 9ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ **22.09.2019** ರಂದು ಭಾನುವಾರ ಬೆಳಿಗ್ಗೆ 11.30ಕ್ಕೆ ಸಂಘದ ಅಧ್ಯಕ್ಷರಾದ **ಶ್ರೀ.ಜೆ.ಕೃಷ್ಣಮೂರ್ತಿಯವರ** ಅಧ್ಯಕ್ಷತೆಯಲ್ಲಿ **ಸ್ವಾತಿ ರೆಸ್ಟೋರೆಂಟ್, ನಂ.1, ಪ್ಲಾಟ್ ಫಾರಂ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು 560 020** ರಲ್ಲಿ ನಡೆಸಲಾಗುವುದು. ಮಾನ್ಯ ಸದಸ್ಯರು ಮಹಾಸಭೆಯ ಸಂಘದ ಕಾರ್ಯಕಲಾಪದಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

### ಕಾರ್ಯಕಲಾಪಗಳ ವಿವರ

1. ಪ್ರಾರ್ಥನೆ.
2. ಸ್ವಾಗತ ಭಾಷಣ.
3. ಸದಸ್ಯರ ಸಭೆಗೆ ಸೂಚನಾ ಪತ್ರವನ್ನು ಓದಿ ದಾಖಲಿಸುವುದು.
4. ದಿನಾಂಕ 23.08.2018 ರಂದು ನಡೆದ 8ನೇ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಓದಿ ಅಂಗೀಕರಿಸುವುದು
5. 2018–19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಮಂಡನೆ ಮತ್ತು ಅನುಮೋದನೆ
6. 2018–19ನೇ ಸಾಲಿನ ಆಯವ್ಯಯ ಹೆಚ್ಚಾಗಿ ಖರ್ಚಾಗಿರುವ ಅಥವಾ ಉಳಿತಾಯವಾಗಿರುವ ಬಾಬ್ತುಗಳನ್ನು ಅನುಮೋದಿಸುವುದು ಹಾಗು 2019–20ನೇ ಸಾಲಿನ ಅಂದಾಜು ಪತ್ರಕ್ಕೆ ಮಂಜುರಾತಿಯನ್ನು ನೀಡುವುದು
7. ಅಧ್ಯಕ್ಷರ ಭಾಷಣ
8. ವಂದನಾರ್ಪಣೆ
9. ಸಭೆಯ ಮುಕ್ತಾಯದ ನಂತರ ಭೋಜನ

ದಿನಾಂಕ : 20–08–2019 **ಕಾರ್ಯಕಾರಿ ಮಂಡಳಿಯ**
ಸ್ಥಳ : ಬೆಂಗಳೂರು **ಆದೇಶದ ಮೇರೆಗೆ**

ಸಹಿ/–
ಅಧ್ಯಕ್ಷರು
ಭಾರತೀಯ ಅಂಚೆ ಮತ್ತು ಆರ್.ಎಂ.ಎಸ್. ಇಲಾಖೆ ನೌಕರರ
ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು.

**ವಿಶೇಷ ಸೂಚನೆ :** ಮಾನ್ಯ ಸದಸ್ಯರು ಸಭೆಗೆ ಬರುವಾಗ ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು ಹಾಗೂ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ ಸಂಘದ ಕಛೇರಿಗೆ ತಿಳಿಸತಕ್ಕದ್ದು.

# 2018-19 ನೇ ವಾರ್ಷಿಕ ಮಹಾಸಭೆಯ ವರದಿ:

ಸಂಘದ 9ನೇ ವಾರ್ಷಿಕ ಮಹಾಸಭೆಯು ದಿನಾಂಕ 22.09.2019 ರಂದು ಸ್ವಾತಿ ರೆಸ್ಟೋರೆಂಟ್, ನಂ.1, ಪ್ಲಾಟ್ ಫಾರಂ ರಸ್ತೆ, ಶೇಷಾದ್ರಿ ಪುರಂ, ಬೆಂಗಳೂರು 560 020 ರಲ್ಲಿ ಸಂಘದ ಅಧ್ಯಕ್ಷರಾದ ಶ್ರೀ.ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯದರ್ಶಿ ಮತ್ತು ಎಲ್ಲಾ ನಿರ್ದೇಶಕರ ಉಪಸ್ಥಿತಿಯಲ್ಲಿ ಹಾಗೂ ಆಹ್ವಾನಿತರಾದ ಸಂಘದ ಸದಸ್ಯರು/ಸಹಸದಸ್ಯರು ಸಮಕ್ಷಮದಲ್ಲಿ ಯಶ್ವಸಿಯಾಗಿ ನೆರವೇರಿತು.

**ಸ್ವಾಗತ ಭಾಷಣ:**

ಮಹಾಸಭೆಯು ಶ್ರೀಮತಿ.ಕುಮಾರಿ ಪೂಜಾ ಮತ್ತು ತೇಜಸ್ವಿನಿ ಹವರಗಣೇಶನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಗಳು ಪ್ರಾರಂಭವಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ನಿರ್ದೇಶಕರಾದ ಶ್ರೀ.ನಟರಾಜ್‌ರವರ ವಹಿಸಿಕೊಂಡು ನಿರ್ದೇಶಕರಾದ ಶ್ರೀ.ಕಾಶೀನಾಥ್ ಪತ್ರೀಮಠ್‌ರವರಿಗೆ ಸಭೆಗೆ ಆಹ್ವಾನಿತರಾಗಿರುವ ಎಲ್ಲಾ ಸದಸ್ಯರಿಗೂ/ಸಹಸದಸ್ಯರಿಗೂ ಆಡಳಿತ ಮಂಡಳಿಯವರಿಗೂ ಸ್ವಾಗತಭಾಷಣವನ್ನು ಮಾಡಲು ಕೋರಿದರು

ನಿರ್ದೇಶಕರಾದ ಶ್ರೀ.ಕಾಶೀನಾಥ್ ಪತ್ರೀಮಠ್‌ರವರು ದೇವರನ್ನು ಸ್ಮರಿಸುತ್ತಾ ಅಧ್ಯಕ್ಷರಾದ ಶ್ರೀ.ಕೃಷ್ಣಮೂರ್ತಿಯವರನ್ನು, ಉಪಾಧ್ಯಕ್ಷರಾದ ಶ್ರೀ.ಯು.ಎಸ್.ರಾಜೇಶ್‌ರವರನ್ನು, ನಿರ್ದೇಶಕರವರನ್ನು ಮತ್ತು ಕಾರ್ಯದರ್ಶಿಯವರನ್ನು ಹಾಗೂ ಡೆವಲಪರ್‌ರಾದ ಶ್ರೀ.ಭಾಸ್ಕರ್ ರವನ್ನು ಸಭೆಗೆ ಆಹ್ವಾನಿಸಿ ಎಲ್ಲದಕ್ಕಿಂತ ಮುಖ್ಯವಾಗಿ ಸಭೆಗೆ ಆಗಮಿಸಿರುವ ಸಂಘದ ಸದಸ್ಯರು/ಸಹಸದಸ್ಯರಿಗೆ ವಿಶೇಷವಾದ ಸ್ವಾಗತ ಕೋರಿ ಸಭೆಯನ್ನು ಶಾಂತ ರೀತಿಯಾಗಿ ಹಾಗೂ ಯಶ್ವಸಿಯಾಗಿ ನಡೆಸಿಕೊಡಲು ಸವಿನಯನವಾಗಿ ಕೋರಿದರು. ನಂತರ ಸಂಘದ ನಿರ್ದೇಶಕಿಯಾದ ಶ್ರೀಮತಿ.ವಸಂತಲಕ್ಷ್ಮೀಯವರು ಸಭೆಗೆ ಸೂಚನಾ ಪತ್ರವನ್ನು ಓದಿ ತಿಳಿಯಪಡಿಸಿದರು.

**ಸರ್ವಸದಸ್ಯರ ಸಭೆಯ ನೋಟಿಸ್ ಓದಿ ದಾಖಲು ಮಾಡುವುದು**

ಸರ್ವಸದಸ್ಯರ ಸಭೆಯ 8ನೇ ಸಭೆಯ ತಿಳುವಳಿಕೆ ಪತ್ರವನ್ನು ಸಂಘದ ನಿರ್ದೇಶಕರಾದ ಶ್ರೀ.ರೇಣುಕಾಪ್ರಸಾದ್‌ರವರು ಸಭೆಗೆ ಓದಿ ಹೇಳಿದರು.

**2018-2019ನೇ ಸಾಲಿನ ಆಯವ್ಯಯ (ಹೆಚ್ಚಾಗಿ ಖರ್ಚಾಗಿರುವ ಮತ್ತು ಉಳಿತಾಯವಾಗಿರುವ ಬಾಬ್ತು) ವನ್ನು ಮಂಡಿಸಿ ಅನುಮೋದನೆಯನ್ನು ಪಡೆಯುವುದು ಹಾಗೂ 2019-20ನೇ ಸಾಲಿನ ಆಯವ್ಯಯ ಮಂಡನೆ ಮತ್ತು ಅನುಮೋದನೆ:**

ಸಂಘದ ಉಪಧ್ಯಾಕ್ಷರಾದ ಶ್ರೀ.ಯು.ಎಸ್.ರಾಜೇಶ್‌ರವರು 2018-2019ನೇ ಸಾಲಿನ ಲೆಕ್ಕ ಪತ್ರವನ್ನು ಮತ್ತು 2019-2020ರ ಸಾಲಿನ ಅವಧಿಯ ಮುಂಗಡ ಆಯವ್ಯಯವನ್ನು ಸಭೆಯಲ್ಲಿ ಮಂಡಿಸಿ, ಸದಸ್ಯರ ಅನುಮೋದನೆ ಯನ್ನು ಪಡೆದರು.

ಅಧ್ಯಕ್ಷರಾದ ಶ್ರೀ.ಕೃಷ್ಣಮೂರ್ತಿಯವರು ನೆರೆದಿರುವ ಎಲ್ಲಾ ಸದಸ್ಯರಿಗೂ ವಂದಿಸಿ ಎಲ್ಲರನ್ನು ಸಭೆಗೆ ಸ್ವಾಗತಿಸಿದರು. ಕೆಲವು ಸದಸ್ಯರಿಗೆ ಬದಲಾದ ವಿಳಾಸ ಹಾಗೂ ವ್ಯಾಟ್ಸ್ ಆಪ್‌ನಿಂದ ಸೂಚನಾ ಪತ್ರ ತಲುಪಿಲ್ಲ ಹಾಗಾಗಿ ಬದಲಾದ ವಿಳಾಸ ಹಾಗೂ ಮೊಬೈಲ್ ನಂಬರ್ ಮತ್ತು ಇ-ಮೇಲ್ ಗಳನ್ನು ನವೀಕರಿಸಿ ಸಹಕರಿಸಬೇಕೆಂದು ಹಾಗೂ information ತಿಳಿದು ಬಂದಿರುವ ಸದಸ್ಯರಿಗೆ ವಂದನೆ ತಿಳಿಸಿದರು. ಹಿಂದಿನ ವಾರ್ಷಿಕ ಸಭೆಯಲ್ಲಿ ತಿಳಿಸಿದ ಹಾಗೆ ಮೊದಲನೆಯ ಹಂತದ ಕೆಲಸ ಪೂರೈಸಲಿದೆ. ಪೂರ್ತಿ ಹಣ ಕಟ್ಟಿ ಸಹಕರಿಸಿದವರಿಗೆ ವಂದನೆ ತಿಳಿಸಿದರು ಎಲ್ಲರೂ ಕುತುಹಲದಿಂದ ಕಾಯುತ್ತಿರುವ ಮೊದಲನೆಯ ಹಂತದ ನಿರ್ಮಾಣ ರಸ್ತೆ ಡಾಂಬರೀಕರಣ ಹಾಗೂ ನೀರು ಸಂಗ್ರಹಣ ಘಟಕ (water tank) ಪೂರ್ಣಗೊಳ್ಳಲಿದೆ. ಇನ್ನು ಒಂದು ತಿಂಗಳಲ್ಲಿ ನೊಂದಣಿಗೆ ಸಿದ್ಧವಾಗಿರುತ್ತದೆ. ಆದರೆ ಮಾಲೂರು ನಗರ ಆಡಳಿತ ಅಧ್ಯಕ್ಷರು (town planning chairman) ನೇಮಕ ಇನ್ನೂ ಆಗಿಲ್ಲದಿರುವುದರಿಂದ ವಿಳಂಭವಾಗಲಿದೆ.. ಇಷ್ಟರೊಳಗೆ ಮೊದಲನೆಯ ಹಂತದ ನಿವೇಶನ ಹಂಚಿಕೆದಾರನ್ನು ಉದ್ದೇಶಿಸಿ ಮತ್ತೊಮ್ಮೆ ವಿಶೇಷವಾದ ಸಭೆಯನ್ನು ಕರೆಯಲಾಗುತ್ತದೆ.

ಈಗ ಎರಡನೇ ಹಂತದ ಕಾರ್ಯ ಇನ್ನು ಹದಿನೈದು ದಿನಗಳಲ್ಲಿ ಪ್ರಾರಂಭವಾಗುತ್ತದೆ. ಹದಿನೈದು ಎಕರೆ ಜಮೀನನ್ನು ಎರಡಿ ಭಾಗಗಳಾಗಿ ವಿಂಗಡಿಸಿ ನೀಲಿ ನಕ್ಷೆ ತಯಾರಿಸಲಾಗಿದೆ. ಪ್ಲಾನ್ ಅಂಗೀಕಾರವಾದ ಕೊಡಲೇ ಕೆಲಸ ಶುರುವಾಗುತ್ತದೆ. ಈ ಹಂತದಲ್ಲಿ ಎಲ್ಲಾ ಅಳತೆಯ ನಿವೇಶನಗಳು ಬರುವ ಅನುಕೂಲವನ್ನು ಮಾಡಲಾಗಿದೆ. ಹೋದ ವರ್ಷವೇ ಹೇಳಿದ ಹೆಚ್ಚುವರಿ ಹಣ ಪೂರ್ತಿಯಾಗಿ ಕಟ್ಟಿಲ್ಲ. ಕಟ್ಟಿದ ಸದಸ್ಯರ ಜೇಷ್ಠತಾ ಪಟ್ಟಿ ಇದೆ. ಹಣ ಕಟ್ಟದಿದ್ದಲ್ಲಿ ಕೆಲಸವೂ ಆಗುವುದಿಲ್ಲ. ಹಣ ಕಟ್ಟದಿದ್ದರೆ ಕಟ್ಟಿದ ಸದಸ್ಯರಿಗೂ ತೊಂದರೆಯಾಗುತ್ತದೆ. ಇದು ಸಹಕಾರ ಸಂಘ, ಸದಸ್ಯರು ಕಟ್ಟಿದ ಹಣದಿಂದಲೇ ಎಲ್ಲಾ ಕೆಲಸವಾಗಬೇಕು. ಇದು ಸ್ವಂತ ಹಣ ತೊಡಗಿಸಿ ನಿವೇಶನ ಹಂಚುವ ಖಾಸಗಿ ಸಂಸ್ಥೆಯಲ್ಲಿ ಪೂರ್ತ ಹಣ ಕಟ್ಟಿದರೆ ಮಾತ್ರ ಕೆಲಸವೂ ಪೂರ್ಣವಾಗುವುದು. ಆದ್ದರಿಂದ ಸದಸ್ಯರು ಬರುವ ಡಿಸೆಂಬರ್ 2019 ಒಳಗೆ ಬಾಕಿ ಇರುವವರು ಹಣ ಕೊಟ್ಟು ಸಹಕರಿಸಿಬೇಕೇಂದು ಕೋರಿ ಹಾಗೆ ನಂತರ ಬಾಕಿ ಉಳಿಸಿಕೊಂಡವರಿಗೆ ಚದರಡಿಗೆ 50ರೂ. ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆಂದು ತಿಳಿಯಪಡಿಸಿದರು. ಹಾಗೆಯೇ ಮುಂದುವರೆಯುತ್ತಾ ಪೂರ್ತಿ ಕೆಲಸ ಮುಗಿದು ನೊಂದಣಿವೇಳೆಗೆ ಹಣ ಕಟ್ಟುವ ಮನೋಭಾವ ಇರುವವರು ದಯಾಮಾಡಿ ಪರಿಸ್ಥಿತಿ ಅರ್ಥ ಮಾಡಿಕೊಂಡು ಈಗಲೇ ಹಣ ಕಟ್ಟಿ ಇಲ್ಲದಿದ್ದರೆ ನಿವೇಶನ ಹಂಚುವ ಕಾರ್ಯವೂ ವಿಳಂಬವಾಗುತ್ತದೆ ಎಂದರು. ಎರಡನೇ ಹಂತದ ಕೆಲಸವನ್ನು ಡಿಸಂವರ್ 2020 ಒಳಗೆ ಪೂರೈಸಿ ಕೊಡಲಾಗುವುದು ಎಂದು ತಿಳಿಸಿದರು. ಸಂಘದ ಮೇಲೆ ಇಟ್ಟಿರುವ ನಂಬಿಕೆ ಮತ್ತು ಸದಸ್ಯರು ಕೊಟ್ಟ ಸಹಕಾರಕ್ಕಾಗಿ ವಂದನೆ ತಿಳಿಸಿದರು.

ನಂತರ ಡೆವಲಂಪರ್ ಆದ ಶ್ರೀ.ಭಾಸ್ಕರ್‌ರವರೂ ಮಾತನಾಡಿ 50ಎಕರೆ ಭೂಸ್ವಧೀನ ಕಾರ್ಯದಲ್ಲಿ ನಡೆದ ತೊಂದರೆ, ಕೋರ್ಟ್ ಕೇಸ್, ಸರ್ಕಾರದ ವತಿಯಿಂದ ಆದ ವಿಳಂಬ ಎಲ್ಲವನ್ನೂ ನಿವಾರಣೆಗೊಳಿಸಿ ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಸಂಘಕ್ಕೆ ಹಸ್ತಾಂತರಿಸಲಾಗಿದೆ. ಎಲ್ಲಾ ಅಳತೆಯ ನಿವೇಶನಕ್ಕೆ ಅನುಕೂಲ ಕಲ್ಪಿಸಲಾಗಿದೆ ಹಾಗೂ ಆದಷ್ಟು ಬೇಗ ನೊಂದಣಿ ಮಾಡಿಕೊಡಲಾಗುವುದು ಎಂದು ತಿಳಿಸಿದರು.

<u>ಸದಸ್ಯರ ಅನಿಸಿಕೆಗಳು ಹಾಗೂ ಅಧ್ಯಕ್ಷರ ಪ್ರತಿಕ್ರಿಯೆ:-</u>

1. ಸದಸ್ಯರಾದ ಶ್ರೀ.ಶ್ರೀನಿವಾಸ್ ಪ್ರಸಾದ್ (ಸದಸ್ಯತ್ವ ನಂ.964) ರವರು ಮಾತಾನಾಡಿ ಹೆಚ್ಚುವರಿ ಮಾಡಿದ ಹಣವನ್ನು ಕಟ್ಟಲು ಒಂದೇ ಅಥವಾ ಎರಡು ಕಂತಿನಲ್ಲಿ ಕಟ್ಟಬಹುದಾ?
2. ಸದಸ್ಯರಾದ ಶ್ರೀ.ಮಂಜುನಾಥ್ (ಸದಸ್ಯತ್ವ ನಂ.838) 30*40* ಅಳತೆಯ ನಿವೇಶನಕ್ಕೆ ಪೂರ್ತಿ ಹಣ ಕಟ್ಟಿದರೆ ಯಾವಾಗ ಕೆಲಸ ಪೂರೈಸಿ ನೊಂದಣಿಯಾಗುತ್ತದೆ.
3. ಸದಸ್ಯರಾದ ಶ್ರೀ.ವೆಂಕಟ್ ಕೃಷ್ಣಯ್ಯ (ಸದಸ್ಯತ್ವ ನಂ.741) ರವರು ಮಾತಾನಡಿ ಎಲ್ಲಾ ಅಳತೆಯ ನಿವೇಶನವನ್ನು ಯಾವ ಸರಾಸರಿ (ratio) ಪರಿಗಣನೆಗೆ ತೆಗೆದು ಕೊಂಡಿದ್ದೀರಿ ಯಾಕೆಂದರೆ 30*40* ನಿವೇಶನ ಮೊದಲನೆಯ ಹಂತದಲ್ಲಿ ಇಲ್ಲ.
4. ಸದಸ್ಯರಾದ ಶ್ರೀಮತಿ ಆರ್.ಭವಾನಿ (ಸದಸ್ಯತ್ವ ನಂ.579) ರವರು ಮಾತಾನಾಡಿ 20*30* ನಿವೇಶನಕ್ಕಾಗಿ ಬಾಕಿ ಹಣ ಕಟ್ಟಿದ್ದರೆ ಒಂದು ವರ್ಷದಲ್ಲಿ ನೊಂದಣಿ ಆಗುತ್ತದೆಯಾ?
5. ಸದಸ್ಯರಾದ ಶ್ರೀಮತಿ.ಗೀತಾ.ವಿ.ಭಟ್ (ಸದಸ್ಯತ್ವ ನಂ.1313) ರವರು ಮಾತಾನಾಡಿ 2013ರಲ್ಲಿ ಹಣ ಕಟ್ಟಿದ್ದೇವೆ. ಈಗ ಹೆಚ್ಚುವರಿ ಹಣ ಕಟ್ಟಿ ನೊಂದಣಿಗಾಗಿ ಒಂದು ವರ್ಷ ಕಾಯಬೇಕು. ತದನಂತರ ಮತ್ತೊಮ್ಮೆ ಹೆಚ್ಚುವರಿ ಹಣಕ್ಕಾಗಿ ಪ್ರಸ್ತಾವನೆ ಮಾಡುವುದಿಲ್ಲ ಎಂದು ಆಶ್ವಾಸನೆ ನೀಡುವಿರಾ?
6. ಸದಸ್ಯರಾದ ಶ್ರೀಮತಿ.ನಳಿನಿ (ಸದಸ್ಯತ್ವ ನಂ.876) ರವರು ಮಾತಾನಾಡಿ ಒಟ್ಟಾರೆ ಬಡಾವಣೆಯ ವಿಸ್ತೀರ್ಣದ ಬಗ್ಗೆ ಸರಿಯಾದ ಮಾಹಿತಿಯ ಬಗ್ಗೆ ವಿವರಣೆ ಕೇಳಿದರು.
7. ಸದಸ್ಯರಾದ ಶ್ರೀ.ಪ್ರಸಾದ್ ಕುಲಕರ್ಣಿ (ಸದಸ್ಯತ್ವ ನಂ.1339) ರವರು ಮಾತಾನಾಡಿ 2018ರ ವಾರ್ಷಿಕ ಸಭೆಯಲ್ಲಿ ತಿಳಿಸಿದ ಹೆಚ್ಚುವರಿ ಹಣವನ್ನು ಕಟ್ಟದವರ ಜೇಷ್ಠತಾ ಪಟ್ಟಿ ತಯಾರಿದೆಯಾ. ಹಿಂದೆ ಪುಸ್ತಕದಲ್ಲಿ ಪ್ರಕಟಿಸಿದ ಹಾಗೆ ಈಗಲೂ ಲಭ್ಯ ಇದೆಯಾ?

ಸದಸ್ಯರ ಪ್ರಶ್ನೆಗಳಿಗೆ ಸಂಘದ ಅಧ್ಯಕ್ಷರು ಸೂಕ್ತವಾದ ಉತ್ತರವನ್ನು ನೀಡಿದರು. ಸದಸ್ಯರು ಕಟ್ಟುವ ಹಣಕ್ಕೆ ಖಂಡಿತ ಸಂಘದಿಂದ ಸಹಕಾರ ಇದೆ. ಆದರ ಪ್ರಕಾರ ಜೇಷ್ಠತೆಯ ಪಟ್ಟಿ ತಯಾರಿಸಲಾಗುತ್ತೆ. ಎರಡನೇ ಹಂತ ಡಿಸಂಬರ್ 2020ರ ವಳಗೆ ಪೂರೈಸುವ ಆಶ್ವಾಸನೆ ಕೊಟ್ಟರು. 50*80* ಮತ್ತು 40*60* ಕಮ್ಮಿ ಇದೆ. ಅದಕ್ಕೆ ಹೆಚ್ಚುವರಿ ಹಣ ನಿಗದಿಸಲಾಗಿದೆ ಹಾಗಾಗಿ ಮೊದಲನೆಯ ಹಂತದಲ್ಲಿ ಬಂದಿದೆ ಹಾಗೆ 30*40* ನಿವೇಶನಗಳ ಅಗತ್ಯ ಜಾಸ್ತಿ ಇರುವುದರಿಂದ ಮೊದಲನೆಯ ಹಂತದ ಹಿಂದೆಯೆ ಮುಂದುವರೆಯುತ್ತದೆ ಯಾರೂ ಹಣ ಕಟ್ಟಿಲ್ಲವೂ ಅವರಿಗೆ ಹೆಚ್ಚುವರಿ ಶುಲ್ಕ ವಿಧಿಸಲಾಗುತ್ತದೆ. ಮೊದಲನೆಯ ಹಂತದ ಬಡಾವಣೆ ಮಾತು ಕೊಟ್ಟ ರೀತಿ ನಡೆದಿದ್ದೇವೆ. ಅವಶ್ಯಕತೆ ಇದ್ದು ಅನಿವಾರ್ಯ ವಾದರೆ ಚಿಕ್ಕದಾದ ಹೆಚ್ಚುವರಿ ಇರುತ್ತೆ ಪೂರ್ತಿ 34 ಎಕರೆ ಕೈಯಲ್ಲಿ ಇದೆ. ಒಟ್ಟಿಗೆ ಪ್ಲಾನ್ನಾಗಿ ಡೆಲ್ಲಿಯಿಂದ ಅನುಮತಿ ಬೇಕು ಆದರೆ ವಿಳಂಭವಾಗುವ ಕಾರಣ ಮಾಲೂರು ಟೌನ್ ಪ್ಲಾನ್ನಿಂದ ಹಂತ ಹಂತವಾಗಿ ಎಂಟು ಎಕರೆ ಬಡಾವಣೆಯ ರಚನೆಯನ್ನು ಮಾಡಲಾಗುತ್ತದೆ. ಸಂಘದ ಪ್ರತಿ ಕೆಲಸ ಪಾರದರ್ಶಕವಾಗಿದೆ. ಎಲ್ಲಾ ಮಾಹಿತಿ ಕಛೇರಿಯಲ್ಲಿ ಲಭ್ಯವಿದೆ. ಸದಸ್ಯರು ಇಲ್ಲಿ ತನಕ ಸಂಘಕ್ಕೆ ಕೊಟ್ಟ ಸಹಕಾರಕ್ಕಾಗಿ ವಂದನೆ ತಿಳಿಸಿದರು. ಹೆಚ್ಚುವರಿ ಹಣ ಕಟ್ಟಿದವರ ಜೇಷ್ಠತಾ ಪಟ್ಟಿ ಲಭ್ಯವಿದೆ ಮುಂದೆಯೂ ಸದಸ್ಯರು ಬಾಕಿ ಉಳಿದಿರುವ ಹಣ ಕೊಟ್ಟ ಸಂಘವು ತ್ವರಿತವಾಗಿ ಕಾರ್ಯ ನಿರ್ವಹಿಸಲು ಸಂಘದ ಜೊತೆ ಕೈಗೊಡಿಸಿ ಸಹಕರಿಸಬೇಕೆಂದು ತಿಳಿಸಿದರು.

<u>ವಂದನಾರ್ಪಣೆ:</u>

ಸಂಘದ ನಿರ್ದೇಶಕಾರದ ಶ್ರೀ.ಕಾಶಿನಾಥ್ ಪತ್ರಿಪತ್‌ರವರು ಹಾಜರಿದ್ದ ಹಾಗೂ ಸಹಕಾರ ನೀಡಿದ್ದ ಎಲ್ಲರಿಗೂ ವಂದನಾರ್ಪಣೆಯನ್ನು ಸಲ್ಲಿಸಿದರು. ಸೊಗಸಾದ ಶುಚಿ-ರುಚಿಯಿಂದ ಕೊಡಿದ್ದ ಭೋಜನದೊಂದಿಗೆ ಸಂಘದ 9ನೇ ವಾರ್ಷಿಕ ಸಭೆ ಮುಕ್ತವಾಯಿತು.